ಕರ್ನಾಟಕ ಸರ್ಕಾರ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ


ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.

ದೂ. 080-22028032/34/ಫ್ಯಾಕ್ಸ್ 22028041


ದಿನಾಂಕ : 18-6-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ತ್ಯಾಜ್ಯ ನೀರು ನಿರ್ವಹಣೆ ಕಾರ್ಯಾಗಾರ:<br>ಉದ್ಘಾಟನೆ:<br>ಸಿದ್ದರಾಮಯ್ಯ, ಮುಖ್ಯಮಂತ್ರಿಗಳು<br>ಅಧ್ಯಕ್ಷತೆ:<br>ವಿನಯ್‌ಕುಮಾರ್ ಸೊರಕೆ, ನಗರಾಭಿವೃದ್ಧಿ ಸಚಿವರು. | 19-06-2015<br>ಶುಕ್ರವಾರ<br>ಬೆಳಗ್ಗೆ<br>9-30 ಗಂಟೆಗೆ | ಕೊಠಡಿ ಸಂಖ್ಯೆ 419,<br>ನಾಲ್ಕನೇ ಮಹಡಿ,<br>ವಿಕಾಸಸೌಧ,<br>ಬೆಂಗಳೂರು. |
| 2. | ಪತ್ರಿಕಾಗೋಷ್ಠಿ:<br>ರಾಮವಿಲಾಸ್ ಪಾಸ್ವಾನ್,<br>ಕೇಂದ್ರ ಆಹಾರ ಸಚಿವರು. | 19-06-2015<br>ಶುಕ್ರವಾರ<br>ಮಧ್ಯಾಹ್ನ<br>12-30 ಗಂಟೆಗೆ | ಕಳಿಂಗ ಹಾಲ್,<br>ಹೋಟೆಲ್ ಲಲಿತ್ ಅಶೋಕ್,<br>ಬೆಂಗಳೂರು. |

ನಿರ್ದೇಶಕರ ಪರವಾಗಿ

## ಮಾಧ್ಯಮ ಮುಖ್ಯಸ್ಥರ ಗಮನಕ್ಕೆ

ಜೂನ್ 29 ರಿಂದ ಬೆಳಗಾವಿಯಲ್ಲಿ ನಡೆಯುವ ರಾಜ್ಯ ವಿಧಾನ ಮಂಡಲದ ಮಳೆಗಾಲದ ಅಧಿವೇಶನಕ್ಕೆ ತಮ್ಮ ಮಾಧ್ಯಮದಿಂದ ನಿಯೋಜನೆಗೊಳ್ಳಲಿರುವ ಪ್ರತಿನಿಧಿಗಳ ವಿವರವನ್ನು ಜೂನ್ 25 ರ ಮಧ್ಯಾಹ್ನ 1–00 ಗಂಟೆಯೊಳಗೆ ಈ ಕೆಳಕಂಡ ನಮೂನೆಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ಶಾಖೆಯಲ್ಲಿ ಹೆಸರನ್ನು ನೊಂದಾಯಿಸಲು ಕೋರಿದೆ.

ವಿಶೇಷ ಸೂಚನೆ: ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಮುಖ ದಿನ ಪತ್ರಿಕೆ ಮತ್ತು ಪ್ರಮುಖ ಸುದ್ದಿ ವಾಹಿನಿಗಳಿಗೆ ಮಾತ್ರ ಅವಕಾಶ.

ಬೆಂಗಳೂರಿನಿಂದ ಪ್ರಕಟಗೊಳ್ಳುವ ಪ್ರಮುಖ ದಿನಪತ್ರಿಕೆಯ ಗರಿಷ್ಠ ನಾಲ್ವರು ವರದಿಗಾರರು ಮತ್ತು ಓರ್ವ ಛಾಯಾಗ್ರಾಹಕರು ಹಾಗೂ ಪ್ರಮುಖ ಸುದ್ದಿ ವಾಹಿನಿಯಲ್ಲಿ ನಾಲ್ವರು ವರದಿಗಾರರು ಮತ್ತು ನಾಲ್ವರು ವೀಡಿಯೋಗ್ರಾಹಕರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ, ಈ ಆಮಂತ್ರಣವು ರಾಜ್ಯ ವಿಧಾನಸಭೆ ಮತ್ತು ರಾಜ್ಯ ವಿಧಾನ ಪರಿಷತ್ ಪಾಸ್‌ಗಳನ್ನು ಈಗಾಗಲೇ ಪಡೆದಿರುವವರ ಹೆಸರುಗಳನ್ನು ಮಾತ್ರ ಕಳುಹಿಸಲು ಕೋರಲಾಗಿದೆ.

## ನಮೂನೆ

| ಕ್ರಮ ಸಂಖ್ಯೆ | ವರದಿಗಾರರ ಹೆಸರು, ಪದನಾಮ, | ಮಾಧ್ಯಮ ಸಂಸ್ಥೆ | ಇ–ಮೇಲ್ ವಿಳಾಸ | ಮೊಬೈಲ್ ಸಂಖ್ಯೆ |
|---|---|---|---|---|
| | | | | |

## ಪತ್ರಿಕಾ ಪ್ರಕಟಣೆ

# ಮೊಬೈಲ್ ಫೋನ್ ದುರಸ್ತಿ ತರಬೇತಿ

**ಬೆಂಗಳೂರು, ಜೂನ್ 18 (ಕರ್ನಾಟಕ ವಾರ್ತೆ)**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಯುವಜನತೆಗಾಗಿ ಸ್ವಯಂ ಉದ್ಯೋಗ ಒದಗಿಸಿಕೊಡುವ ನಿಟ್ಟಿನಲ್ಲಿ "ಮೊಬೈಲ್ ಫೋನ್ ದುರಸ್ತಿ" ಉಚಿತ ತರಬೇತಿ ಶಿಬಿರವನ್ನು ಜುಲೈ 2 ರಿಂದ 16 ರವರೆಗೆ ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ರಾಜ್ಯ ಯುವ ಕೇಂದ್ರದಲ್ಲಿ ಏರ್ಪಡಿಸಲಾಗಿದೆ.

ಆಸಕ್ತ ಯುವಕ/ಯುವತಿಯರು ತಮ್ಮ ಜನ್ಮ ದಿನಾಂಕದ ದಾಖಲೆಯೊಂದಿಗೆ (ಎಸ್.ಎಸ್.ಎಲ್.ಸಿ. ಅಂಕಪಟ್ಟಿ) ಜೂನ್ 30 ರೊಳಗಾಗಿ ಸಹಾಯಕ ನಿರ್ದೇಶಕರು, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 1, ಇವರಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ **080 – 22214911** ನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಬಾಬು:ಜಿಪಿಆರ್.

# ಅವಧಿ ವಿಸ್ತರಣೆ

**ಬೆಂಗಳೂರು, ಜೂನ್ 18 (ಕರ್ನಾಟಕ ವಾರ್ತೆ)**

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು 2014–15 ನೇ ಸಾಲಿನಲ್ಲಿ ದೂರ ಶಿಕ್ಷಣದ ಒಂದು ವರ್ಷದ ಕೃಷಿಯಲ್ಲಿ ಡಿಪ್ಲೋಮಾ ಕೋರ್ಸ್‌ಗೆ ಎರಡನೇ ಸೆಮಿಸ್ಟರ್‌ನ ಶುಲ್ಕ ಪಾವತಿಸುವ ದಿನಾಂಕವನ್ನು ಜೂನ್ 30 ರವರೆಗೆ ವಿಸ್ತರಿಸಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080–23418883 ಅಥವಾ 080–23410560 ಅಥವಾ 080–23516353 ಸಂಪರ್ಕಿಸಬಹುದಾಗಿದೆ.

ಬಾಬು:ಜಿಪಿಆರ್.